ಕೆಲಸ ಪೂರ್ಣ ಮಾಡಿದ್ದು ಈಗ್ಗೆ ೫–೬ ತಿಂಗಳ ಹಿಂದೆಯೆ ಶಿವಮೊಗ್ಗ ವಿಶೇಷ ಜಿಲ್ಲಾಧಿಕಾರಿಗಳು ಅದಕ್ಕೆ ಅಗತ್ಯವಾಗಿ ಜಿಲ್ಲಾಧಿಕಾರಿಗಳು ಕೊಡಬೇಕಾದ ಪಾಲಿನ ಹಣ ಕೊಟ್ಟಿದ್ದು ಈವರೆಗೆ 'ಚಿಲ್ಲಿಂಗ್ ಪ್ಲಾಂಟ್' ಪ್ರಾರಂಭಿಸಿರುವುದಿಲ್ಲ. ಈ ಭಾಗದ ಜನ ೨೫–೩೦ ವರ್ಷದಿಂದ ಬರಗಾಲಕ್ಕೆ ತುತ್ತಾಗಿದ್ದು ಸಾವಿರಾರು ಜನ ಕಡು ಬಡವರಿಗೆ ಎಮ್ಮೆಗಳನ್ನು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ಕೊಡಿಸಿದ್ದು ಆ ಬಡವರ ಶ್ರಮ ವ್ಯರ್ಥವಾಗಿ ತಪ್ಪಿಸಬೇಕಾದರೆ ತಕ್ಷಣ ಈ ಚಿಲ್ಲಿಂಗ್ ಪ್ಲಾಂಟ್ ಪ್ರಾರಂಭಿಸುವ ದೃಷ್ಟಿಯಿಂದ ಸರಕಾರ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯ ಬಯಸುತ್ತೇನೆ.

ಶ್ರೀ ಕೆ. ಎಂ ಕೃಷ್ಣಾರೆಡ್ಡಿ.—ಈ ಬಗ್ಗೆ ಮಾಹಿತಿಯನ್ನು ತರಿಸಿ ನಾಳೆ ಸಭೆಯಲ್ಲಿ ಉತ್ತರ ಒದಗಿಸುತ್ತೇನೆ.

XII ಕೊಡಗಿನಲ್ಲಿ ಏಲಕ್ಕಿಗೆ ಕಟ್ಟೆರೋಗ ಬಂದಿರುವುದರಿಂದ ರೈತರ ಅಲ್ಪಾವಧಿ ಸಾಲವನ್ನು ದೀರ್ಘಾವಧಿಯಾಗಿ ಪರಿವರ್ತಿಸುವುದು

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ, ಕೊಡಗಿನ ಎಲ್ಲಾ ಕಡೆ ಏಲಕ್ಕಿಗೆ ಕಟ್ಟೆರೋಗ ಬಂದು ಏಲಕ್ಕಿ ತೋಟಗಳೆಲ್ಲ ಹಾಳಾಗಿ ಏಲಕ್ಕಿ ಬೆಳೆಗಾರರು ಬಹಳ ತೊಂದರೆಗೀಡಾಗಿದ್ದಾರೆ. ಅವರು ಸಹಕಾರ ಸಂಘಗಳಿಂದ ಪಡೆದುಕೊಂಡಿರುವ ಸಾಲವನ್ನು ಮರುಪಾವತಿ ಮಾಡಲು ಸಾಧ್ಯವಾಗದೆ ಅವರ ಆರ್ಥಿಕ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಅರಣ್ಯ, ಸಹಕಾರ ಮಂತ್ರಿಗಳು ದಿನಾಂಕ ೨೦–೫–೧೯೮೬ರಲ್ಲಿ ಕೊಡಗಿನ ಶಾಂತಳ್ಳಿ ವಿಭಾಗಕ್ಕೆ ಭೇಟಿ ಕೊಟ್ಟು ಅಲ್ಲಿಯ ಜನತೆಗೆ ಸಾಲವನ್ನು ಶಾರ್ಟ್ ಟರ್ಮ್ ಸಾಲದಿಂದ ಮೀಡಿಯಂ ಟರ್ಮ್ ಸಾಲವಾಗಿ ಪರಿವರ್ತಿಸುವ ಬಗ್ಗೆ ಭರವಸೆ ಕೊಟ್ಟು ಬಂದಿರುತ್ತಾರೆ. ಆದರೆ ಈತನಕ ಅವರಿಗೆ ಕೊಟ್ಟ ಈ ಭರವಸೆಯನ್ನು ಏಕೆ ಈಡೇರಿಸಲಿಲ್ಲ ಮತ್ತು ಅವರಿಗೆ ಸಾಲದ ರಿಯಾಯಿತಿಯಲ್ಲಿ ಶಾರ್ಟ್ ಟರ್ಮ್ ಸಾಲವನ್ನು ಮೀಡಿಯಂ ಟರ್ಮ್ ಸಾಲವನ್ನಾಗಿ ಪರಿವರ್ತಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ನಾನು ಮತ್ತು ಅರಣ್ಯ ಮಂತ್ರಿಗಳು ಶಾಂತಳ್ಳಿಗೆ ಹೋಗಿದ್ದುದು ನಿಜ. ಅಲ್ಲಿ ಏಲಕ್ಕಿ ಹಾಳಾಗಿರುವುದು ನಿಜ. ಆದರೆ ಅದಕ್ಕೆ ಒಂದು ಶಿಸ್ತು ಇದೆ. ಜಿಲ್ಲಾಧಿಕಾರಿಗಳು ೬ ಆಣಿಗಿಂತ ಕಡಿಮೆ ಬೆಳೆ ಬಂದಿದೆ ಎಂದು ರಿಪೋರ್ಟ್ ಕಳುಹಿಸಬೇಕು. ಅದರ ಮೇಲೆ ನಬಾರ್ಡ್‌ನವರಿಗೆ ಹೇಳಿ ಅದನ್ನು ಕನ್ವರ್ಟ್ ಮಾಡಿ ಫರ್ದರ್ ಲೋನ್ ಕೊಡಿ ಎಂದು ಹೇಳಬಹುದು. ಆದರೆ ಅದು ಬರಲಿಲ್ಲ. ಮತ್ತೆ ಶಾಂತಳ್ಳಿಯಲ್ಲಿ ಏನು ಸಾಲ ಔಟ್ ಸ್ಯಾಂಡಿಂಗ್ ಇದೆ ಅದರಲ್ಲಿ ೩೦ ಪರ್ಸೆಂಟ್ ಏಲಕ್ಕಿಗೂ ೭೦ ಪರ್ಸೆಂಟ್‌ನಷ್ಟು ಭತ್ತಕ್ಕೂ ಸಾಲವನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಅವರು ಭತ್ತಕ್ಕೆ ತೆಗೆದುಕೊಂಡಿದ್ದ ಸಾಲವನ್ನಾದರೂ ವಾಪಸ್ಸು ಕೊಟ್ಟಿದ್ದರೆ ಚೆನ್ನಾಗಿತ್ತು. ಈಗ ಅದೂ ಇಲ್ಲ, ಇದೂ ಇಲ್ಲವಾಗಿದೆ. ಆರಣೆಗಿಂತ ಬೆಳೆ ಕಡಿಮೆಯಾಗಿದೆಯೆಂದು ಜಿಲ್ಲಾಧಿಕಾರಿಗಳು ರಿಪೋರ್ಟ್ ಕೊಟ್ಟರೆ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ಮಾನ್ಯ ಸದಸ್ಯರು ಕಾರ್ಯತತ್ಪರರಾಗಬೇಕು. ಜೊತೆಗೆ ನಾನೂ ಕೂಡಾ ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಕಾಗದವನ್ನು ಬರೆಯುತ್ತೇನೆ.

XIII ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಿಕ್ಷಾಗಳಿಗೆ ಬೆಲೆ ಬಾಳುವ ಮೀಟರ್‌ನ್ನು ಅಳವಡಿಸಲು ಸರ್ಕಾರ ಒತ್ತಾಯಿಸಿರುವುದು

ಶ್ರೀಮತಿ ಮನೋರಮಾ ಮಧ್ವರಾಜ್ ಮತ್ತು (ಶ್ರೀ ವಸಂತ ವಿ. ಸಾಲ್ಯಾನ್).—ಮಾನ್ಯ ಅಧ್ಯಕ್ಷರೆ, ಆಟೋ ರಿಕ್ಷಾಗಳಿಗೆ ಮೀಟರ್ ಅಳವಡಿಸಬೇಕೆಂದು ಹಿಂದೆ ಸರ್ಕಾರ ನಿಬಂಧನೆ ಹಾಕಿದಾಗ ಚಾಲಕರು ಮತ್ತು ಮಾಲೀಕರು ವಿರೋಧಿಸದೆ ಮೀಟರ್ ಅಳವಡಿಸಿದರು. ಆಗ ಒಪ್ಪಿದ ಮೀಟರ್‌ನ್ನು ಈಗ ಒಪ್ಪದೆ ಟ್ಯಾಕ್ಸಿಗಳಿಗೆ ಹಾಕುವಂತಹ ದೊಡ್ಡ ಮೀಟರ್ (ಫ್ಲ್ಯಾಗ್ ಮೀಟರ್) ಹಾಕಬೇಕೆಂದೂ ಇಲ್ಲವಾದರೆ ರಿಕ್ಷಾ ಪರ್ಮಿಟ್ ನವೀಕರಣವಾಗುವುದಿಲ್ಲವೆಂದೂ ಸರ್ಕಾರ ಆಜ್ಞೆ ಮಾಡಿದೆ. ಪ್ರಯಾಣ ಮಾಡಿದ್ದಕ್ಕೆ ಸರಿಯಾದ ದರವನ್ನು ತೋರಿಸಲು ಸುಮಾರು ೩೦೦–೪೦೦ ರೂಪಾಯಿಗಳ ಕ್ರಯದ ಸಣ್ಣ ಮೀಟರು ಇಷ್ಟು ಕಾಲ ಜೋಡಿಸಿರುವಾಗ ಈಗ ಸುಮಾರು ೨೦೦೦ ದಿಂದ ೨೫೦೦ ರೂಪಾಯಿಗಳ ಕ್ರಯದ ದೊಡ್ಡ ಮೀಟರ್ ಅಳವಡಿಸುವುದಕ್ಕೆ ಆಜ್ಞೆ ಮಾಡಿರುವುದರ ಔಚಿತ್ಯವೆನು? ಬಡ ಸ್ವಲ್ಪುದ್ಯೋಗಿಗಳಿಗೆ ನೆರವಾಗುವುದರ ಬದಲು ದೊಡ್ಡ ಮೀಟರ್ ತಯಾರಿಕರಿಗೆ ಗಿರಾಕಿ ಒದಗಿಸುವುದರಲ್ಲಿ ಒಳಗುಟ್ಟೇನು? ರಾಜ್ಯದಲ್ಲಿ ಸಮತಟ್ಟಾಗಿಲ್ಲದ ರಸ್ತೆಗಳಿರುವ ಮಲೆನಾಡು ಭಾಗದಲ್ಲಿ